OS 05/2020
PW-1

ದಿನಾಂಕಃ 22-07-2025

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ 2 ನೇ ಪ್ರತಿವಾದಿ ಪರ ಮಾನ್ಯ ಶ್ರೀ KNT ವಕೀಲರಿಂದಃ**

ಸಾಕ್ಷಿಗೆ ಈಗ ಸದರಿ ವಾಟ್ನಿ ಮೌಖಿಕವಾಗಿ ಆಗಿರುತ್ತದೋ ಅಥವಾ ಲಿಖಿತ ರೂಪದಲ್ಲಿ ಆಗಿರುತ್ತದೋ ಎಂದು ಹೇಳಿದ್ದಕ್ಕೆ ಸಾಕ್ಷಿ ತಮಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಕುಟುಂಬದ ಸ್ವತ್ತುಗಳಲ್ಲಿ ಒಂದೇ ಬಾರಿ ವಾಟ್ನಿಯಾಗಿರುತ್ತದೆ. ಸದರಿ ವಾಟ್ನಿ ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ 1980-81 ರಲ್ಲಿ ಆಗಿರುತ್ತದೆ. ಸದರಿ 1980-81 ರಲ್ಲಿ ಆಗಿರುವ ವಾಟ್ನಿಯಲ್ಲಿ ದಾವಾ ಸ್ವತ್ತು ಸದರಿ ಗಿರಿಜಮ್ಮ ಇವರ ಪಾಲಿಗೆ ಬಂದಿರುತ್ತದೆ. 1980-81 ರಲ್ಲಿ ಆಗಿರುವ ವಾಟ್ನಿಯಲ್ಲಿ ದಾವಾ ಸ್ವತ್ತು ಗಿರಿಜಮ್ಮ ಇವರಿಗೆ ಕೊಡಲಾಗಿರುತ್ತದೆ ಎಂದು ತೋರಿಸಲು ವಾಟ್ನಿ ಪತ್ರವನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಈಗ ಅವರು ಪ್ರಸ್ತುತ ಪ್ರಕರಣದಲ್ಲಿ ನಿಶಾನೆಯಾಗಿ ಗುರುತಿಸಿಕೊಂಡಿರುವ ದಾಖಲೆಗಳನ್ನು ತೋರಿಸಿ ಸದರಿ ವಾಟ್ನಿ ಪತ್ರವನ್ನು ಹಾಜರುಪಡಿಸಿರುತ್ತೀರಾ ಎಂದು ಕೇಳಿದ್ದಕೆ ಸಾಕ್ಷಿ ತಮಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ವಾಟ್ನಿ ಪತ್ರ ನನ್ನ ಹತ್ತಿರ ಇರುತ್ತದೆ ಎಂದರೆ ಸರಿ. 1980-81 ರಲ್ಲಿ ಆಗಿರುವ ವಾಟ್ನಿಯಲ್ಲಿ ದಾವಾ ಸ್ವತ್ತು ಗಿರಿಜಮ್ಮ ಇವರಿಗೆ ಕೊಡಲಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ವಾಟ್ನಿ ಪತ್ರವನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಸದರಿ ದಾವಾ ಸ್ವತ್ತು ಪೀತ್ರಾರ್ಜಿತ ಸ್ವತ್ತಗಾಗಿರುತದ್ದೋ ಅಥವಾ ಸ್ವಯಾರ್ಜಿತ ಆಸ್ತಿಯಾಗಿರುತ್ತದೋ ಎಂದು ಹೇಳಿದಕ್ಕೆ ಸಾಕ್ಷಿ ಅದು ತಮ್ಮ ತಂದೆಯವರಿಗೆ ಸೇರಿದ್ದು ಆದರೆ ಅದು ಅವರಿಗೆ ಯಾವ ರೀತಿ ಬಂದಿರುತ್ತದೆ ಎಂದು ತಮಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ.

2. ದಾವಾ ಸ್ವತ್ತನ್ನು 2 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಗಿರಿಜಮ್ಮ ಇವರು ನಮ್ಮ ಮನೆಯಲ್ಲಿ ವಾಸ ಮಾಡುತ್ತಿದ್ದರು. ಸದರಿ ಗಿರಿಜಮ್ಮ ಇವರು ತಾವು ಸಾಯುವರೆಗೆ ನಮ್ಮ ಮನೆಯಲ್ಲಿ ಇರುತ್ತಿದ್ದರು ಎಂದು ತೋರಿಸಲು ನಾನು ಪ್ರಸ್ತುತ

ಪ್ರಕರಣದಲ್ಲಿ ಯಾವುದೇ ಸಾಕ್ಷ್ಯಾಧರವನ್ನು ಹಾಜರುಪಡಿಸಿರುವುದಿಲ್ಲ. ಜನರು ಒಂದೇ ಕುಟುಂಬದಲ್ಲಿ ವಾಸ ಮಾಡುತ್ತಿದ್ದರೆ ಅವರಿಗೆ ನ್ಯಾಯ ಪಡಿತರ ಚೀಟಿ ಹಾಗೂ ಮತದಾನ ಚೀಟಿಯನ್ನು ಕೊಡಲಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮತದಾರರ ಚೀಟಿ ಇತ್ತು ಎಂದು ಹೇಳುತ್ತಾರೆ. ಸದರಿ ಸಂದರ್ಭದಲ್ಲಿ ನ್ಯಾಯ ಪಡಿತರ ಚೀಟಿ ಇರಲಿಲ್ಲ ಎಂದು ತೋರಿಸಲು ಪಂಚಾಯತ್ ಕಡೆಯಿಂದ ಹಾಗೂ ತಹಶೀಲ್ದಾರ ಇವರ ಕಡೆಯಿಂದ ದಾಖಲೆಯನ್ನು ಪಡೆದು ಅವುಗಳನ್ನು ಪ್ರಸ್ತುತ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವುದಿಲ್ಲ.

3. ಸದರಿ ಗಿರಿಜಮ್ಮ ಇವರು ಸಾಯುವವರೆಗೆ ಅವರನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತು ಗಿರಿಜಮ್ಮ ಇವರ ಹೆಸರಿಗೆ ಆಗುವ ಮುಂಚಿತವಾಗಿ ಅದು ಯಾರ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸನ್ 1979-80 ರ ಸಾಲಿನವರೆಗೆ ದಾವಾ ಸ್ವತ್ತಿನ ಪಹಣಿ ಪತ್ರಿಕೆಗಳಲ್ಲಿ 2 ನೇ ಪ್ರತಿವಾದಿಯ ಹೆಸರು ಮಾಲಿಕರು ಹಾಗೂ ಸ್ವಾಧೀನಾನುಭವದಾರರು ಎಂದು ಬರುತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸನ್ 1979-80 ರ ಸಾಲಿನ ದಾವಾ ಸ್ವತ್ತಿನ ಪಹಣಿ ಪತ್ರಿಕೆಗಳಲ್ಲಿ 2 ನೇ ಪ್ರತಿವಾದಿಯ ಹೆಸರನ್ನು ತೆಗೆದು ಸದರಿ ಗಿರಿಜಮ್ಮ ಇವರ ಹೆಸರನ್ನು ನಮೂದು ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಅವರು ಅದರ ನಿರೂಪಾದಿಕ ಮಾಲಿಕರಾಗಿದ್ದದ್ದು ನನಗೆ ಗೊತ್ತಿದ್ದರು ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶ್ರೀಮತಿ ನೀಲಮ್ಮ ಗಂಡ ರಾಮಣ್ಣ ಅಸಪ್ಪಾಕಾರ ಎನ್ನುವವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಈ ನ್ಯಾಯಾಲಯಲ್ಲಿ ನಾನು 2 ನೇ ಪ್ರತಿವಾದಿ ವಿರುದ್ದ ಒಂದು ದಿವಾನಿ ವ್ಯಾಜ್ಯವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿವಾನಿ ವ್ಯಾಜ್ಯ ನಂಬರ 13/2018 ಇದರ ವಿರುದ್ದ ಮೇಲ್ಮನವಿಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿ ಹಾಗೂ ಅದು ಮಾನ್ಯ ಜಿಲ್ಲಾ ನ್ಯಾಯಾಲಯ ಯಾದಗಿರಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ ಎಂದರೆ ಸರಿ. ಅಸಲು ದಾವಾ ನಂಬರ 118/1 of 1966 ಶೋರಾಪೂರ ಮಾನ್ಯ JMFC ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದು ಅದರಲ್ಲಿ ಸದರಿ ನೀಲಮ್ಮ ಇವರು ತೀರಿಕೊಂಡ ನಂತರ ನನ್ನ ತಂದೆಯವರನ್ನು ಅವರ ವಾರಸುದಾರರ ಮಗನೆಂದು ಸೇರಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಅಸಲು ದಾವಾ ನಂಬರ

13/2018 ರಲ್ಲಿ ನನಗೆ ಸದರಿ ವಿಚಾರದ ಬಗ್ಗೆ ತಿಳಿದು ಬಂದಾಗ ನಾನು ಇಲ್ಲಿವರೆಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ನಾನು ಸದರಿ ನೀಲಮ್ಮ ಇವರ ವಾರಸುದಾರರಾಗಿದ್ದರಿಂದ ನಾನು ಪ್ರತಿವಾದಿ 2 ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ 113/2018 ಇರುವುದರಿಂದ ನಾನು ವೈಶಮ್ಯದಿಂದ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿ ಅದರ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಪರ ಮಾನ್ಯ ವಕೀಲರು ಈ ಮೇಲೆ 2 ನೇ ಪ್ರತಿವಾದಿ ಪರ ವಕೀಲರು ಮಾಡಿರುವ ಪಾಟಿ ಸವಾಲು ಅನುಮೊದನೆ ಮಾಡಿಕೊಂಡಿರುತ್ತಾರೆ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.